4

# ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 330 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ.

## ವಿಷಯ

ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ) ಮಂಡ್ಯ ಈ ಸಂಸ್ಥೆಯಲ್ಲಿನ 06 ಮಂದಿ ಉಪನ್ಯಾಸಕರು ಪರೀಕ್ಷಾ ಅಕ್ರಮಗಳಲ್ಲಿ ಭಾಗಿಯಾಗಿದ್ದು, ಇವರು ನಡೆಸಿರುವ ಅಕ್ರಮಗಳಿಂದಾಗಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯದ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಬಯಸುತ್ತೇನೆ.

## ಸರ್ಕಾರದ ಉತ್ತರ

ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ) ಮಂಡ್ಯ ಇಲ್ಲಿನ ಬೋಧಕ ಸಿಬ್ಬಂದಿಗಳಾದ ರಾಜ್ಯಶಾಸ್ತ್ರ ಪ್ರಾಧ್ಯಾಪಕರುಗಳಾದ ಡಾ॥ ಹೆಚ್.ಎಂ.ವರದರಾಜು, ಶ್ರೀ ಸಿ.ಎನ್.ಮನು ಹಾಗೂ ಶ್ರೀ ಮರಿಗೌಡ, ನಿವೃತ್ತ ರಾಜ್ಯಶಾಸ್ತ್ರ ಸಹಪ್ರಾಧ್ಯಾಪಕರು, ಶ್ರೀ ಬಸವಣ್ಣ.ಎಂ., ಗಣಕ ವಿಜ್ಞಾನ ಸಹಾಯಕ ಪ್ರಾಧ್ಯಾಪಕರು, ಶ್ರೀ ಮೋಹನ್‌ಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕರು, ಶ್ರೀ ಜಿ.ಎಸ್. ದೇವರಾಜೇಗೌಡ, ಆಂಗ್ಲಭಾಷಾ ಸಹಪ್ರಾಧ್ಯಾಪಕರು ಇವರುಗಳು ಈ ಹಿಂದೆ ಕಾಲೇಜಿನ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ್ದ ಶ್ರೀ ಶಿವನಂಜೇಗೌಡ ಹಾಗೂ ಶ್ರೀ ಎ.ಬಿ.ಶಂಕರ್ ಇವರುಗಳಿಗೆ ಆಡಳಿತದಲ್ಲಿ ಸಹಕಾರ ನೀಡದೆ ಹಾಗೂ ಪರೀಕ್ಷಾ ಕಾರ್ಯದಲ್ಲಿ ಕರ್ತವ್ಯ ನಿರ್ಲಕ್ಷತೆ ವ್ಯಕ್ತಪಡಿಸಿರುವುದಾಗಿ ಪ್ರಾದೇಶಿಕ ಜಂಟಿ ನಿರ್ದೇಶಕರು, ಶಿವಮೊಗ್ಗ ಇವರು ತಮ್ಮ ತಪಾಸಣಾ ವರದಿ ಸಂಖ್ಯೆ:ಪ್ರಾಕಶಿ:ಕಾಶಿಇ:236:ಸಸ್ವಾಕಾಮ: 2018-19 ದಿ:09.10.2018 ರಲ್ಲಿ ತಪಾಸಣಾ ವರದಿ ಸಲ್ಲಿಸಿದ್ದು, ಸದರಿ ವರದಿಯನ್ನು ಆಧರಿಸಿ, ಸದರಿಯವರುಗಳ ವಿರುದ್ಧ ದೋಷಾರೋಪಣಾ ಪಟ್ಟಿ ಅನುಬಂಧ-1 ರಿಂದ 4ರೊಂದಿಗೆ ಕಾರಣ ಕೇಳುವ ನೋಟೀಸನ್ನು ಮೇಲ್ಕಂಡ 06 ಉಪನ್ಯಾಸಕರುಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ 04 ಡಿಸಿಇ 2019, ದಿನಾಂಕ:29.01.2019ರಲ್ಲಿ ಜಾರಿಗೊಳಿಸಿರುತ್ತದೆ.

ತದನಂತರ ಆಪಾದಿತ ನೌಕರರು ಕಾರಣ ಕೇಳುವ ನೋಟಿಸ್‌ಗೆ ಸಮಜಾಯಿಷಿಯನ್ನು ಸಲ್ಲಿಸಿದ್ದು, ಸರ್ಕಾರದ ಪತ್ರ ಸಂಖ್ಯೆ:ಇಡಿ:04:ಡಿಸಿಇ:2019 ದಿ:15.04.2019 ರಲ್ಲಿ ಅವರ ಸಮಜಾಯಿಷಿಯನ್ನು ಬಗ್ಗೆ ಆಯುಕ್ತರ ಅಭಿಪ್ರಾಯವನ್ನು ಕೋರಿದ್ದು, ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರು ತಮ್ಮ ಪತ್ರ **ಸಂಖ್ಯೆ:ಕಾಶಿಇ:82:ಕಲೋ:2018-19:ತವಿ ದಿ: 11.06.2019 ರಲ್ಲಿ** ಮೇಲ್ಕಂಡ 06 ಜನ ಸಹಪ್ರಾಧ್ಯಾಪಕರು ಗ್ರೂಪ್ 'ಎ' ಹುದ್ದೆಗೆ ಸೇರಿದವರಾಗಿರುವುದರಿಂದ ಮತ್ತು ಸದರಿಯವರು ಆರೋಪಗಳನ್ನು ಒಪ್ಪಿಕೊಳ್ಳದೇ ನಿರಾಕರಿಸಿರುವುದರಿಂದ, ಈ ಬಗ್ಗೆ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ವಿಚಾರಣೆಯನ್ನು ನಡೆಸಬಹುದಾಗಿದೆ ಎಂದು ವರದಿನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಪ್ರಸ್ತುತ ಸದರಿ ಆಪಾದಿತರುಗಳಾದ ಶ್ರೀ ಜಿ.ಎಸ್.ದೇವರಾಜೇಗೌಡ, ಶ್ರೀ ಎಂ.ಬಸವಣ್ಣ, ಶ್ರೀ ಹೆಚ್.ಎಂ. ವರದರಾಜು, ಡಾ॥ ಸಿ.ಎನ್. ಮನು,ಶ್ರೀ ಮರಿಗೌಡ, ನಿವೃತ್ತ ರಾಜ್ಯಶಾಸ್ತ್ರ ಸಹಪ್ರಾಧ್ಯಾಪಕರು ಹಾಗೂ ಶ್ರೀ ಮೋಹನ್‌ಕುಮಾರ್. ಸಿ.ಎಸ್. ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ, ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಂ.ಎಸ್.ಹೆಗ್ಡೆ ನಾಗ್ರೆ ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸಿ, 02 ತಿಂಗಳೊಳಗಾಗಿ ವಿಚಾರಣೆ ನಡೆಸಿ,

ವರದಿಯನ್ನು ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಸರ್ಕಾರದ **ಆದೇಶ ಸಂಖ್ಯೆ:ಇಡಿ:04:ಡಿಸಿಇ:2019 ದಿ:15.02.2020 ರಲ್ಲಿ** ಆದೇಶಿಸಲಾಗಿರುತ್ತದೆ.

ಇಲಾಖಾ ವಿಚಾರಣಾ ವರದಿಯು ಸರ್ಕಾರದಲ್ಲಿ ಸ್ವೀಕೃತಗೊಂಡ ನಂತರ ನಿಯಮಾನುಸಾರ ಪರಿಶೀಲಿಸಿ ಶಿಸ್ತು ಕ್ರಮ ಜರುಗಿಸಲಾಗುವುದು.

(ಡಾ॥ ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ ಸಚಿವರು

ಇಡಿ 53 ಡಿಸಿಇ 2020